ಹೋಗಿ ಮನೆಗೆ. ನಾನೂ ಹೊರಡುತ್ತೇನೆ" ಎಂದು ಕಲಾವಿದರಿಗೆ ಹೇಳಿದರು. ಎಲ್ಲರೂ ಮನೆಗೆ ಹೋದರೂ ಸೂರ್ಯತೇಜರು ಸ್ಟೇಜಿನ ಮೂಲೆಯಲ್ಲಿ ಕಾಲಿಳಿಸಿ ಕುಳಿತುಕೊಂಡೇ ಇದ್ದರು. ಸೂರಿ ಎಲ್ಲಾ ಲೈಟನ್ನು ಆರಿಸುತ್ತಿರುವಾಗ ಇವರನ್ನು ಕಂಡು ಬಳಿಗೆ ಬಂದು ನಿಂತ. ಇಲ್ಲ, ಸೂರ್ಯತೇಜರು ಗಮನಿಸಲೇ ಇಲ್ಲ. ಗಾಢವಾದ ಯೋಚನೆಯಲ್ಲಿ ಮುಳುಗಿದ್ದರು. ಕಣ್ಣುಗಳು ತೇವಗೊಂಡಂತಿದ್ದವು. ಸೂರಿಯೇ ಮಾತನಾಡಿಸಿದ.

"ಸರ್, ಇನ್ನೂ ಹೊರಟಿಲ್ವ... ನಾಳೆ ಮತ್ತೆ ತಾಲೀಮು ಮಾಡೋಣ, ಚಿಂತೆ ಮಾಡಬೇಡಿ."

"ನೀನು ಹೇಳುವುದು ಸರಿ, ಆದರೆ ನನಗೆ ಮಕ್ಕಳಿರದಿದ್ದರೂ ಮಗನನ್ನು ಕಳೆದುಕೊಂಡೆ ಎಂದು ಊಹಿಸಿಕೊಂಡರೆ ಕಣ್ಣು ಒದ್ದೆಯಾಗುತ್ತದೆ. ಆದರೆ ಆ ಅಪ್ಪನ ಪಾತ್ರ ಮಾಡುತ್ತಿರುವ ಜಯದೀಪನ ಕಣ್ಣುಗಳಲ್ಲೇಕೆ ನೀರು ತುಂಬಿಬರುವುದಿಲ್ಲ? ಎದೆ ಒಡೆದಂತಾಗುವುದಿಲ್ಲ?!" ಎಂದು ಹೇಳುವಾಗ ಗಂಟಲು ಕಟ್ಟಿತು.

ಸೂರ್ಯತೇಜರು ಈ ರೀತಿ ಬೇಸರದಲ್ಲಿದ್ದದ್ದನ್ನು ಸೂರಿ ನೋಡಿಯೇ ಇರಲಿಲ್ಲ. ಯಾಕೆ ಹೀಗೆ ಎಂಬುದು ಅವನಿಗೆ ಪ್ರಶ್ನೆಯಾಗಿಯೇ ಉಳಿಯಿತೇ ಹೊರತು ಉತ್ತರ ಹೊಳೆಯಲಿಲ್ಲ.

"ಎಲ್ಲಾ ನಾಳೆ ಸರಿ ಹೋಗುತ್ತದೆ. ಬೇಸರಿಸಬೇಡಿ ಸರ್" ಎಂದು ಸಮಾಧಾನ ಹೇಳಿದ.

"ಸಾವು ಎಂಬುದನ್ನು ಅನುಭವಿಸಿ ಅಳುವುದನ್ನು ಕಲಿಯಬೇಕು ಕಲಾವಿದ. ಆಗಮಾತ್ರ ಆ ನೋವು ಮನವನ್ನು ತಟ್ಟುತ್ತದೆ ಅಲ್ಲವೇ?" ಎನ್ನುತ್ತ ಅಲ್ಲಿಂದ ಹೊರಟವರು ಮತ್ತೆ ಹೊರಗಿನ ಕಟ್ಟೆಯಲ್ಲಿ ಕುಳಿತರು.

***

**ಹದಿನೈದು ವರ್ಷಗಳಲ್ಲಿ ಯಾರೂ ಕೇಳಿರದ ಪ್ರಶ್ನೆಯನ್ನು ಸೂರಿ ಕೇಳಿಬಿಟ್ಟಿದ್ದ. ಸೂರ್ಯತೇಜರು ಒಂದಲ್ಲ ಒಂದು ದಿನ ಈ ಪ್ರಶ್ನೆ ಬಂದೀತೆಂಬುದನ್ನು ಮೊದಲೇ ಊಹಿಸಿದ್ದರು.**

ಸೂರ್ಯತೇಜರು ದೂರದ ಹರಿವನಕೊಪ್ಪದಿಂದ ಹೊನ್ನೇಪುರಕ್ಕೆ ಬಂದು ಭಾವಬಿಂಬ ರಂಗ ತರಬೇತಿ ಕೇಂದ್ರಕ್ಕೆ ಸೇರಿ ಈಗ ಇಪ್ಪತ್ತು ವರುಷಗಳೇ ಕಳೆದಿವೆ. ನಾಟಕದ ಹುಚ್ಚು ಅವರನ್ನು ಇಲ್ಲಿಗೆ ಕರೆಸಿಕೊಂಡಿತ್ತು. ಈ ತರಬೇತಿ ಕೇಂದ್ರದ ಮುಖ್ಯಸ್ಥರ ಪರಿಚಯದವರು ಮುಂಬಯಿ ಸೇರಿದ್ದು ಹೊನ್ನೇಪುರದಿಂದ ಐದು ಕಿಲೋಮೀಟರ್ ದೂರದ ಕೇದಿಗೆಹಳ್ಳಿಯಲ್ಲಿರುವ ಅವರ ತೋಟದ ಮನೆಯನ್ನು ಈ ಭಾವಬಿಂಬಕ್ಕೆ ಉಪಯೋಗಿಸಿಕೊಳ್ಳಲು ಕೊಟ್ಟಿದ್ದರು. ಆ ಮನೆಯಲ್ಲಿಯೇ ನಾನು ಉಳಿಯುತ್ತೇನೆಂದು ಹಟಕಟ್ಟಿ ಸೂರ್ಯತೇಜರು ವಾಸವಾಗಿದ್ದರು. ಅವರ ಊರು ಯಾವುದೆಂಬುದಷ್ಟೇ ಅಲ್ಲಿಯ ಜನರಿಗೆ ತಿಳಿದಿತ್ತೇ ಹೊರತು ಯಾರು? ಏನು? ಎಂಬುದರ ಬಗೆಗೆ ತಿಳಿದಿರಲಿಲ್ಲ. ನಾಟಕದವರು ಎಂಬ ಅಸಡ್ಡೆಯಿದ್ದ ಕಾರಣ ಯಾರೂ ಅವರ ಬಗ್ಗೆ ಹೆಚ್ಚು ತಿಳಿದುಕೊಳ್ಳಲೂ ಹೋಗಲಿಲ್ಲ. ಜನಸಂಪರ್ಕವನ್ನು ಬಯಸದೆ ಇರುತ್ತಿದ್ದ ಸೂರ್ಯತೇಜರಿಗೆ ಸೂರಿಯೊಬ್ಬನೇ ಆತ್ಮೀಯ. ಸೂರ್ಯತೇಜರು ಇಲ್ಲಿಯ ಭಾವಬಿಂಬ ರಂಗ ತರಬೇತಿ ಕೇಂದ್ರದಲ್ಲಿ ತರಬೇತಿ ಪಡೆಯುತ್ತ ನಾಟಕದಲ್ಲಿ ಪಾತ್ರಗಳನ್ನು ಮಾಡುತ್ತಿದ್ದ ಕಾಲದಲ್ಲಿ ಕಾಲೇಜಿಗೆ ಸೇರಲಾಗದ ಪರಿಸ್ಥಿತಿಯಲ್ಲಿದ್ದ ಮಾದೇವಗೌಡರ ಮಗ ಸೂರ್ಯನಾರಾಯಣ ಹೊನ್ನೇಪುರದ ಏಕೈಕ ಹೋಟೆಲ್ ದುರ್ಗಾದಲ್ಲಿ ಕೆಲಸಕ್ಕೆ ಸೇರಿ, ಈ ನಾಟಕದವರಿಗೆ ಚಾ ತಂದುಕೊಡುತ್ತಿದ್ದ. ಒಂದು ದಿನ